
# ಗುರುದೇವ



ಇಂದು ರವಿತಾರೆ ಹಿಮಗಿರಿ ಗಂಗೆ ಗೋದಾ ಸಿಂಧು ಶುಭ ಜಲ ನಿಧಿಗಳೆಲ್ಲವು
ಚಂದದಲಿ ಮೆರೆವನ್ನೆಗಂ ಬಂದ "ಶ್ರೀ ಗುರುದೇವ" ಪೊರೆಯಲಿ ಶಿಷ್ಯ ಬಳಗವನು

ಧಾರ್ಮಿಕ ಮಾಸಿಕ ಪತ್ರಿಕೆ

ಶ್ರೀ ಹೊಂಬುಜ ಅತಿಶಯ ಮಹಾಕ್ಷೇತ್ರ ಶ್ರೀ ವೀರನಿರ್ವಾಣ ಶಕವರ್ಷ 2550/ಶ್ರೀ ಕ್ರೋಧಿ ನಾಮ ಸಂವತ್ಸರ

ಪುಟ : ೪ ಸಂಪುಟ : ೭೦ ಸಂಚಿಕೆ : ೦೯

15-09-2024 ಭಾದ್ರಪದ ಮಾಸ : ಶುಕ್ಲ ಪಕ್ಷ ಭಾನುವಾರ

RNI No. 13248/57-POSTEL REGD No. KA/SK/SMG 198/2024-26

ಪರಮ ಸಂರಕ್ಷಕರು, ಸ್ವಾಮಿತ್ವ, ಪ್ರಧಾನ ಸಂಪಾದಕರು : ಜಗದ್ಗುರು ಸ್ವಸ್ತಿಶ್ರೀ ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಗಳವರು, ಶ್ರೀಕ್ಷೇತ್ರ ಹೊಂಬುಜ


ಶ್ರೀ ಕ್ಷೇತ್ರ ಹೊಂಬುಜ



ಭಗವಾನ್ ಶ್ರೀ ಪಾರ್ಶ್ವನಾಥ ಸ್ವಾಮಿ





ಜಗನ್ಮಾತೆ ಶ್ರೀ ಪದ್ಮಾವತಿ ದೇವಿ

ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ

## ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮಿಗಳವರು

**ಶುಭಾಶೀರ್ವಚನ** ಶ್ರೀ ಕ್ಷೇತ್ರ ಹೊಂಬುಜ

## 'ಇಂದ್ರಧ್ವಜಾ ಮಹಾಮಂಡಲ ಪೂಜೆ'

**(ದಿ. 13 ನವೆಂಬರ್ 2024 ರಿಂದ 20 ನವೆಂಬರ್ 2024ರವರೆಗೆ)**

ಜೈನ ಧರ್ಮದಲ್ಲಿ ಮುಕ್ತಿ ಮಾರ್ಗದಲ್ಲಿ ನಡೆಯುವ ಮುನಿಗಳು ಜ್ಞಾನ-ಧ್ಯಾನದಿಂದ ಆತ್ಮಪ್ರಭಾವನೆಯನ್ನು ಮಾಡಿಕೊಳ್ಳುವುದು. ಶ್ರಾವಕರಾದವರು ದಾನ ಮತ್ತು ಜಿನಪೂಜೆಯ ಮಾಡುವ ಮೂಲಕ ಧರ್ಮ ಪ್ರಭಾವನೆಯನ್ನು ಮಾಡಬೇಕು ಎಂದು ಪೂರ್ವಾಚಾರ್ಯರು ಹೇಳಿರುತ್ತಾರೆ. ಗೃಹಸ್ಥರಿಗೆ ರಾಗವು ಹೆಚ್ಚಿರುವುದರಿಂದ ವೀತರಾದ ಜಿನಭಗವಂತರನ್ನು ಪೂಜೆ ಮಾಡುವುದೇ ಮುಖ್ಯ ಧರ್ಮವೆಂದು ಹೇಳಿರುತ್ತಾರೆ. ಪೂಜೆಗೆ ಪ್ರತಿಮೆಯ ಆಶ್ರಯವನ್ನು ಹೇಳಿದರೂ ಅಲ್ಲಿ ಪೂಜಕನ ಭಾವವೇ ಪ್ರಧಾನವಾಗಿರುತ್ತದೆ. ಜಿನೇಂದ್ರ ಪೂಜೆಯನ್ನು ನಿತ್ಯ ನೈಮಿತ್ತಿಕ ಪೂಜೆ ಬೇಧಗಳ ರೀತಿಯಲ್ಲಿ ಜಲ, ಗಂಧಾದಿ ದ್ರವ್ಯಗಳಿಂದ, ಅಭಿಷೇಕ ಮಾಡುವುದು, ದ್ರವ್ಯ ಅರ್ಪಣೆ ಮಾಡುವುದು, ಗೀತೆ, ನೃತ್ಯದ ಜೊತೆ ಭಾವಪೂರ್ವಕವಾಗಿ ಮಾಡುವಂತ ಪೂಜೆಯು ಪ್ರಚುರ ಮಾತ್ರದಲ್ಲಿ ಫಲ ಪ್ರದಾಯಕವಿದೆ ಎಂದೇ ಹೇಳಿದ್ದಾರೆ. 1) ಸದಾರ್ಚನೆ (ನಿತ್ಯ ಪೂಜೆ) 2) ಸರ್ವೋತೋಭದ್ರ (ಚತುರ್ಮುಖ ಪೂಜೆ) 3) ಕಲ್ಪದ್ರುಮ ಪೂಜೆ 4) ಅಷ್ಟಾಹ್ನಿಕ ಪರ್ವ ಪೂಜೆಗಳೆಂದು ಪ್ರಮುಖವಾಗಿ ಭೇದಗಳನ್ನು ಹೇಳಿರುತ್ತಾರೆ. ಇದಲ್ಲದೇ ಇಂದ್ರನ ಮೂಲಕ 458 ಆಕೃತಿಕ ಜಿನಚೈತ್ಯಾಲಯಗಳ ಮೇಲೆ ನಾನಾ ಚಿಹ್ನೆಯಿರುವ ಧ್ವಜಗಳನ್ನು ಅರ್ಚನೆ ಮಾಡಿ ಪೂಜಿಸುವ ವಿಧಾನಕ್ಕೆ "ಇಂದ್ರಧ್ವಜ" ಎಂದೂ ಕರೆಯುತ್ತಾರೆ.

WWW.HOMBUJAPADMAVATI.ORG

ಅನಾದಿ ಕಾಲದಿಂದಲೂ ಜಿನಪೂಜೆಯು ದುರ್ಗತಿ ನಾಶಕವೆಂದು, ಅತುಲ್ಯ ಪುಣ್ಯ ಪ್ರಾಪ್ತಿಯಾಗುವುದೆಂದು ಹೇಳಿರುವುದರಿಂದ ಮನುಷ್ಯ ರೀತಿಯೇ ದೇವತೆಗಳು ಜಿನಭಕ್ತಿ ಮಾಡುತ್ತಾರೆ. ಸೌಧಮೇಂದ್ರನು ಸಾಕ್ಷಾತ್ ತೀರ್ಥಂಕರರ ಪಂಚಕಲ್ಯಾಣ ಪೂಜೆಯನ್ನು ಮಾಡುತ್ತಾನೆ. ಕಾಲಕಾಲಕ್ಕೆ ಪಂಚಮೇರು, ನಂದೀಶ್ವರ ಜಿನಾಲಯಗಳಲ್ಲಿನ ಅಕೃತಿಮ ರತ್ನಮೂರ್ತಿಗಳ ದರ್ಶನ ಮತ್ತು ಪೂಜೆ ಸಪರಿವಾರ ಸಹಿತ ಮಾಡುತ್ತಾನೆ. ಪ್ರಸ್ತುತ ಇಂದ್ರಧ್ವಜ ಆರಾಧನೆಯೂ ದೇವತೆಗಳ ಭಕ್ತಿಗೆ ಸಾಕ್ಷಿಯಾಗಿರುವ ಮಹಾಯಾಗವಿದೆ.

**ಯತ್ರ ತತ್ರ ಕೃತಾ ಪೂಜಾ ತತ್ರ ತತ್ರ ವಿಡೌಜಸಾ ।**
**ಧ್ವಜಾ ಪ್ರಸ್ತಾವಿತಾ ನಿತ್ಯ ತಸ್ಮಾದಿಂದ್ರಧ್ವಜಂ ಸ್ಮೃಮೃತ್‌ಮ್ ॥**

ಅಂದರೆ ಎಲ್ಲೆಲ್ಲಿ ಇಂದ್ರನು ಪೂಜೆ ಮಾಡಿದನ್ನು ಅಲ್ಲಲ್ಲಿ ಅಂದರೆ ಆಯಾ ಚೈತ್ಯಾ (ಬಸದಿ) ಲಯಗಳ ಮೇಲೆ ಧ್ವಜವನ್ನು ಸ್ಥಾಪಿಸುತ್ತಾ ಹೋದನು. ವಿಧಿ-ವಿಧಾನವನ್ನೇ "ಇಂದ್ರಧ್ವಜ" ಎಂಬ ಸಾರ್ಥಕ ಹೆಸರಿನಿಂದ ಕರೆಯುತ್ತಾರೆ.

ಮಧ್ಯಲೋಕದ ಮಧ್ಯದಲ್ಲಿ ಸುಮೇರು ಪರ್ವತವಿದೆ. ಅಲ್ಲಿ 16 ಚೈತ್ಯಾಲಯಗಳಿವೆ. ಅಲ್ಲಿಂದ 13ನೇ ರುಚಕವರ ಪರ್ವತ ಪರ್ಯಂತವಿರುವ ಚೈತ್ಯಾಲಯ ಪೂಜೆಯನ್ನು ಮಾಡಲಾಗಿ, ಒಟ್ಟು 458 ಚೈತ್ಯಾಲಯಗಳಾಗುತ್ತವೆ.

ಈ ಚೈತ್ಯಾಲಯಗಳ ಮೇಲೆ ಮಾಲೆ, ಸಿಂಹ, ಕಮಲ ಮುಂತಾದ ಚಿಹ್ನೆಯಿರುವ ಧ್ವಜಗಳನ್ನು ಏರಿಸಲಾಗುತ್ತದೆ. ಮಹಾಧ್ವಜ, ಕ್ಷುದ್ರಧ್ವಜ ಸಮಸ್ತ ಧ್ವಜಗಳು ಒಟ್ಟು 4,70,880 ಧ್ವಜಗಳಾಗುತ್ತವೆ.

ಇಂತಹ ಒಂದು ಬೃಹತ್ ವಿಧಾನವನ್ನು ಪೂಜ್ಯ ಗಣಿನಿ ಆರ್ಯಿಕಾರತ್ನ ಜ್ಞಾನಮತಿ ಮಾತಾಜಿಯವರು ಸಂಸ್ಕೃತದಿಂದ ಹಿಂದಿಯಲ್ಲಿ ಭಾವಾನುವಾದ ಮಾಡಿ ರಚಿಸಿರುತ್ತಾರೆ. ಉತ್ತರ ಭಾರತದಲ್ಲಿ ಈ ವಿಧಾನವನ್ನು ಪ್ರತಿವರ್ಷ ಅನೇಕ ಊರುಗಳಲ್ಲಿ ಮಾಡುತ್ತಾರೆ. ನಮ್ಮ ಕರ್ನಾಟಕದಲ್ಲಿ ಕೆಲವೆಡೆ ಮಾಡಲಾಗಿದೆ. ಶ್ರೀಕ್ಷೇತ್ರ ಹೊಂಬುಜದಲ್ಲಿ ಇದೇ ಪ್ರಥಮ ಬಾರಿಗೆ ನವೆಂಬರ್ ತಿಂಗಳ ಅಷ್ಟಾಹ್ನಿಕ ಪೂರ್ವದ 13 ರಿಂದ 20ರವರೆಗೆ ಪೂಜ್ಯ ಆರ್ಯಿಕಾರತ್ನ ಶಿವಮತಿ ಮಾತಾಜಿಯವರ ಸಾನಿಧ್ಯದಲ್ಲಿ ನೆರವೇರಲಿದೆ. ಸಮಸ್ತರು ಈ ಪೂಜಾ ಮಹೋತ್ಸವದಲ್ಲಿ ತನು-ಮನ-ಧನಗಳೊಂದಿಗೆ ಭಕ್ತಿ ಪೂರ್ವಕವಾಗಿ ಭಾಗವಹಿಸಿ ಎಂದು ಅಪೇಕ್ಷಿಸುತ್ತೇವೆ.

॥ ಭದ್ರಂ ಭೂಯಾತ್ ॥

## ಆಚಾರ್ಯ ಶ್ರೀ ಶಾಂತಿಸಾಗರ ಮುನಿಮಹಾರಾಜರ ಆಚಾರ್ಯ ಪದಾರೋಹಣ ಶತಮಾನೋತ್ಸವದ ಸ್ಮರಣಾರ್ಥ ಅಂಚೆ ಕಾರ್ಡ್ ಬಿಡುಗಡೆ ಸಮಾರಂಭ

## "ಆಚಾರ್ಯ ಶ್ರೀ 108 ಶಾಂತಿಸಾಗರ ಮುನಿವರ್ಯರು ಪ್ರಾತಃಸ್ಮರಣೀಯರು"

-ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ



**ಹೊಂಬುಜ :** ಪುಣ್ಯ ಪುರುಷ, ಜೈನ ಧರ್ಮದ ಕ್ರಾಂತಿಕಾರಿ, ರಾಷ್ಟ್ರ ಭಕ್ತ ಮುನಿಶ್ರೀ 108 ಅಚಾರ್ಯ ಶ್ರೀ ಶಾಂತಿಸಾಗರ ಮಹಾರಾಜರ ಆಚಾರ್ಯ ಪದಾರೋಹಣ ಶತಮಾನೋತ್ಸವ ಸಂದರ್ಭದಲ್ಲಿ ಔಚಿತ್ಯಪೂರ್ಣವಾಗಿ ಭಾರತೀಯ ಅಂಚೆ ಇಲಾಖೆ ವತಿಯಿಂದ ಸ್ಮರಣಾರ್ಥ ಅಂಚೆ ಕಾರ್ಡ್ ಮುದ್ರಿಸಿ ಲೋಕಾರ್ಪಣೆ ಮಾಡುವ ಕಾರ್ಯವು ಭಾರತೀಯ ಜೈನ ಧರ್ಮದ ಪರಂಪರೆಯನ್ನು ವಿಶ್ವಮಾನ್ಯವಾಗಿ ಇನ್ನಷ್ಟು ಸತ್‌ಪರಿಣಾಮ ಪ್ರಸರಿಸಲಿದೆ ಎಂದು ಹೊಂಬುಜ ಜೈನ ಮಠದ ಪೀಠಾಧೀಶರಾದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರು ತಿಳಿಸಿದರು.

2ನೇ ಪುಟಕ್ಕೆ

## ಕಾಗವಾಡ ತಾಲ್ಲೂಕಿನ ಶಿರಹಟ್ಟಿ-ಐನಾಪುರ-ಶೇಡಬಾಳ-ಶಿಗ್ಗಾಂ ತಾಲ್ಲೂಕಿನ ದುಂಡಶಿ ಗ್ರಾಮದಿಂದ ಶ್ರೀಕ್ಷೇತ್ರಕ್ಕೆ ಪಾದಯಾತ್ರಿಗಳ ಆಗಮನ

## "ಭಕ್ತಿಯ ನಡಿಗೆ ಜೀವನದಲ್ಲಿ ಫಲಶ್ರುತಿ ನೀಡಲಿ"

-ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ




**ಹೊಂಬುಜ :** ನಾಲ್ಕನೇಯ ಶುಕ್ರವಾರದ ದರ್ಶನ, ಪೂಜೆ ಸಮರ್ಪಣೆ ಹಾಗೂ ಭೋಜನ ಸೇವೆಯನ್ನು ಮಾಡುವುದಕ್ಕಾಗಿ ಐನಾಪುರ, ಅಥಣಿ, ಶಿರಹಟ್ಟಿ ಹಾಗೂ ದುಂಡಶಿ ಜೈನ ಸಮಾಜದ ಶ್ರಾವಕರು ಕಾಲ್ನಡಿಗೆಯಲ್ಲಿ ಕ್ರಮಿಸಿ ಕ್ಷೇತ್ರಕ್ಕೆ ಆಗಮಿಸಿದ್ದರು. ಶ್ರೀಮಠದ ವತಿಯಿಂದ ಆತ್ಮೀಕವಾಗಿ ಸ್ವಾಗತಿಸಿ, ಗಜರಾಣಿ ಐಶ್ವರ್ಯ ನಮಸ್ಕರಿಸಿದ ಕ್ಷಣ ಅಭೂತಪೂರ್ವವಾಗಿತ್ತು.


ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ ಗಳವರು ಶ್ರೀಕ್ಷೇತ್ರದ ಭಕ್ತರಾಗಿ ಆಗಮಿಸಿದ ಸರ್ವರನ್ನೂ ಅಭಿನಂದಿಸಿ, ಆಶೀರ್ವಾದ ನೀಡಿದರು. ಶ್ರಾವಣ ಮಾಸದ ಅಂತಿಮ ಶುಕ್ರವಾರದ ವಿಶೇಷ ಷೋಡಶೋಪಚಾರ ಪೂಜೆ, ಅಲಂಕಾರ ಪೂಜೆ ಪರಂಪರಾನುಗತ ಜಿನಾಗಮ ಪೂಜಾ ಧಾರ್ಮಿಕ ವಿಧಿ-ವಿಧಾನಗಳು ಶ್ರಾವಕರ


2ನೇ ಪುಟಕ್ಕೆ

## ಆಚಾರ್ಯ ಶ್ರೀ ಶಾಂತಿಸಾಗರ ಮುನಿಮಹಾರಾಜರ ಆಚಾರ್ಯ ಪದಾರೋಹಣ ಶತಮಾನೋತ್ಸವದ ಸ್ಮರಣಾರ್ಥ ಅಂಚೆ ಕಾರ್ಡ್ ಬಿಡುಗಡೆ ಸಮಾರಂಭ

1ನೇ ಪುಟದಿಂದ





ಅವರು ಸೆ. 04ರ ಬುಧವಾರದಂದು ಹೊಂಬುಜ ಶ್ರೀಕ್ಷೇತ್ರದಲ್ಲಿ ವಿಶೇಷ ಮುದ್ರಿತ ಅಂಚೆ ಕಾರ್ಡ್‌ನ ಬಿಡುಗಡೆ ಸಮಾರಂಭದಲ್ಲಿ ಆಯೋಜಿಸಿದ್ದ ಸಭಾ ಕಾರ್ಯಕ್ರಮದಲ್ಲಿ ಜೈನ ತತ್ವ, ಸಿದ್ಧಾಂತ, ಗ್ರಂಥಗಳ ಬಗ್ಗೆ ನಿಖರವಾಗಿ ಅಭಿಪ್ರಾಯವನ್ನು ಮುಕ್ತವಾಗಿ ಪ್ರವಚನದ ಮೂಲಕ ಸಾದರಪಡಿಸಿ, ನಿರ್ಗ್ರಂಥ ಮುನಿವರ್ಯರ ಆಚಾರ ವಿಚಾರ, ಸ್ವಾತಂತ್ರ್ಯ, ಮೂಲಭೂತ ಹಕ್ಕು ಮತ್ತು ಕರ್ತವ್ಯಗಳ ಬಗ್ಗೆ ಸ್ಪಷ್ಟ ಧೋರಣೆ ಹೊಂದಿದ್ದ ಆಚಾರ್ಯ ಶ್ರೀ ಶಾಂತಿಸಾಗರ ಮಹಾರಾಜರ ಜೀವನ ವೃತ್ತಾಂತದ ಕುರಿತು ವಿವರಿಸಿದರು.

ಈ ಸಂದರ್ಭದಲ್ಲಿ ಶಿವಮೊಗ್ಗ ಅಂಚೆ ಇಲಾಖೆ ಅಧೀಕ್ಷಕರಾದ ಶ್ರೀ ಜಿ. ಜಯರಾಮ್ ಶೆಟ್ಟಿ, ಮುಖ್ಯ ಅತಿಥಿಗಳಾಗಿ ಶ್ರೀ ಆರ್.ಟಿ. ತವನಪ್ಪನವರ್ ಅಧ್ಯಕ್ಷರು ದಕ್ಷಿಣ ಭಾರತ ಹಿಂದಿ ಪ್ರಚಾರ ಸಭಾ ಧಾರವಾಡ, ಶಿವಮೊಗ್ಗ ಅಂಚೆ ಇಲಾಖೆ ಉಪಅಧೀಕ್ಷಕರಾದ ಶ್ರೀ ಗಣೇಶ್, ಹುಬ್ಬಳ್ಳಿ ಶ್ರೀ ಮಹಾವೀರ ಕುಂದೂರ, ಶ್ರೀ ಸಂತೋಷ ಕುಮಾರ್ ಪಾಟೀಲ್, ಶ್ರೀ ಸುಭಾಷ್ ಹೊಸಮನಿ, ಶ್ರೀ ತವನಪ್ಪ ಶಿರಗುಪ್ಪಿ, ಹುಂಚ ಅಂಚೆ ಪಾಲಕರಾದ ಶ್ರೀ ಎಸ್.ಬಿ. ಡಾಕಪ್ಪರವರು ಉಪಸ್ಥಿತರಿದ್ದರು.

ಶ್ರೀ ಸಂತೋಷ್ ಪಾಟೀಲ ಪ್ರಸ್ತಾವಿಕ ಮಾತುಗಳನ್ನಾಡಿದರು. ಶ್ರೀಮಠದ ಆಡಳಿತಾಧಿಕಾರಿ ಶ್ರೀ ಸಿ.ಡಿ. ಅಶೋಕ ಕುಮಾರ್ ಸ್ವಾಗತಿಸಿದರು. ಶ್ರೀ ದೇವೇಂದ್ರ ವಂದಿಸಿದರು. ಹುಂಚ ಜೈನ ಸಮಾಜ, ಶ್ರೀ ಪದ್ಮಾವತಿ ಮಹಿಳಾ ಮಂಡಲ, ಪರವೂರ ಭಕ್ತರು ಶ್ರೀ ಶಾಂತಿಸಾಗರ ಮುನಿವರ್ಯರ ಸ್ಮರಣೆಗಾಗಿ ಅಂಚೆ ಇಲಾಖೆಯ ಅಂಚೆ ಕಾರ್ಡ್ ಲೋಕಾರ್ಪಣೆಯು ಅಭಿನಂದನೀಯ ಎಂದು ಶ್ಲಾಘಿಸಿದರು.

WWW.HOMBUJAPADMAVATI.ORG

## "ಭಕ್ತಿಯ ನಡಿಗೆ ಜೀವನದಲ್ಲಿ ಫಲಶ್ರುತಿ ನೀಡಲಿ"

1ನೇ ಪುಟದಿಂದ



ಕುಟುಂಬಸ್ಥರಿಗೆ ಕ್ಷೇಮವನ್ನುಂಟು ಮಾಡಲಿ. ಐತಿಹಾಸಿಕ ಧಾರ್ಮಿಕ ಪುಣ್ಯಧಾಮವಾಗಿರುವ ಹುಂಚ ಶ್ರೀಕ್ಷೇತ್ರದ ಅಭಿವೃದ್ಧಿಗೆ ಸಹಾಯ-ಸಹಕಾರ ನೀಡುವ ಎಲ್ಲ ಸಮಾಜ ಬಾಂಧವರೂ ಶ್ರೀಕ್ಷೇತ್ರದ ಅವಿಭಾಜ್ಯ ಅಂಗವಾಗಿ ಯಕ್ಷಿ ಶ್ರೀ ಪದ್ಮಾವತಿ ದೇವಿಯ ನಾಮ ಸ್ಮರಣೆಯಿಂದ ಬಾಳನ್ನು ಬೆಳಗಿಸಿ ಭಕ್ತಿಯ ನಡಿಗೆ ಜೀವನದಲ್ಲಿ ಶುಭ ಫಲಶ್ರುತಿ ನೀಡಲೆಂದು ಹರಸಿದರು. ಅಥಣಿ, ಐನಾಪುರ, ಶಿರಹಟ್ಟಿಯಿಂದ 150 ಜನ ಶ್ರಾವಕ ಬಂಧುಗಳು ಹಾಗೂ ದುಂಡಶಿ ಗ್ರಾಮದ 50 ಜನ ಶ್ರಾವಕರು ಆಗಮಿಸಿದ್ದರು.

ಕಾಗವಾಡ ತಾಲ್ಲೂಕಿನ ಐನಾಪುರ, ಶೇಡಬಾಳ, ಹಾಗೂ ಶಿರಹಟ್ಟಿ ಗ್ರಾಮಗಳ ಜೈನ ಶ್ರಾವಕರು ಕಾಲ್ನಡಿಗೆಯ ಮೂಲಕ ಹೊಂಬುಜ ಕ್ಷೇತ್ರಕ್ಕೆ ಪಾದಯಾತ್ರೆ ಕೈಗೊಂಡಿದ್ದು ಶ್ರದ್ಧಾ ಭಕ್ತಿಗೆ ಸಾಕ್ಷಿಯಾಗಿದೆ ಎಂದು ಬೆಳಗಾವಿಯ ನ್ಯಾಯವಾದಿ ಸಂಜಯ ಕುಚನೂರೆ ಈ ಸಂದರ್ಬದಲ್ಲಿ ತಿಳಿಸಿದ್ದಾರೆ.

ಸದೃಢ ಸಮಾಜ ನಿರ್ಮಾಣಕ್ಕಾಗಿ ಪ್ರತಿಯೊಬ್ಬರು ಪಣತೊಡಬೇಕು ಎಂಬ ಆಶಯದೊಂದಿಗೆ ಆ ನಿಟ್ಟಿನಲ್ಲಿ ಕಳೆದ ಹದಿಮೂರು ವರ್ಷಗಳಿಂದ ನಿರಂತರವಾಗಿ ಪಾದಯಾತ್ರೆ ಮೂಲಕ ಜನಜಾಗೃತಿಗೊಳಿಸುತ್ತಿರುವುದು ವಿಶೇಷ.

### ಜಿನ-ದನಿ

ವತ್ಸಲತ್ವ ಪುನರ್ವರ್ತ್ಸೇ ಧನು ವತ್ಸಂ ಪ್ರಕೀರ್ತಿತಃ ।
ಜೈನ ಪ್ರವಚನೇ ಸಮ್ಯಕ್ ಶ್ರದ್ಧಾ ಜ್ಞಾನ ವತ್ಸಣೇ ॥

ಅರ್ಥ: ಆತ್ಮನ ಹಿತವು ವೀತರಾಗಧರ್ಮದಲ್ಲಿದೆ. ಇದರ ಮೇಲೆ ನಂಬಿಕೆಯಿಡುವುದು ಶ್ರಾವಕನ ಕರ್ತವ್ಯವಾಗಿದೆ.

## ಬರಲಿರುವ ಪರ್ವದಿನಗಳು

ಕ್ರೋಧಿನಾಮ ಸಂವತ್ಸರದ
ಭಾದ್ರಪದಮಾಸ ಶುಕ್ಲಪಕ್ಷ ಚತುರ್ದಶಿಯಿಂದ ಆಶ್ವೀಜಮಾಸ ಶುಕ್ಲಪಕ್ಷ ತ್ರಯೋದಶಿಯವರೆಗೆ

ಭಾದ್ರಪದಮಾಸ:
ಸೆ. 17 ಮಂಗಳ-ಚತುರ್ದಶಿ-ಶತಭಿಷ.
ಸೆ. 18 ಬುಧ-ಹುಣ್ಣಿಮೆ-ಪ್ರತಿಪದ, ಅನಂತನ ಹುಣ್ಣಿಮೆ ಕ್ಷಮಾವಳಿ
ಸೆ. 19 ಗುರು-ಬಿದಿಗೆ-ಉ.ಭಾ.-ರೇವತಿ
ಸೆ. 20 ಶುಕ್ರ-ತದಿಗೆ-ಅಶ್ವಿನಿ
ಸೆ. 21 ಶನಿ-ಚತುರ್ಥಿ-ಭರಣಿ
ಸೆ. 22 ಭಾನು-ಪಂಚಮಿ-ಕೃತಿಕಾ
ಸೆ. 23 ಸೋಮ-ಷಷ್ಠಿ-ರೋಹಿಣಿ
ಸೆ. 24 ಮಂಗಳ-ಸಪ್ತಮಿ-ಮೃಗಶಿರಾ
ಸೆ. 25 ಬುಧ-ಅಷ್ಟಮಿ-ಆರಿದ್ರಾ
ಸೆ. 26 ಗುರು-ನವಮಿ-ಪುನರ್ವಸು
ಸೆ. 27 ಶುಕ್ರ-ದಶಮಿ-ಪುಷ್ಯ
ಸೆ. 28 ಶನಿ-ಏಕಾದಶಿ-ಆಶ್ಲೇಷಾ
ಸೆ. 29 ಭಾನು-ದ್ವಾದಶಿ-ಮಘ
ಸೆ. 30 ಸೋಮ-ತ್ರಯೋದಶಿ-ಮಘ
ಅ. 01 ಮಂಗಳ-ಚತುರ್ದಶಿ-ಪೂರ್ವಾ
ಅ. 02 ಬುಧ-ಅಮವಾಸ್ಯೆ-ಉತ್ತರ, ಮಹಾಲಯ ಅಮವಾಸ್ಯೆ

ಆಶ್ವೀಜಮಾಸ :
ಅ. **03 ಗುರು-ಪ್ರತಿಪದ-ಹಸ್ತ, ಹೊಂಬುಜ ಕ್ಷೇತ್ರದಲ್ಲಿ ನವರಾತ್ರಿ ಪ್ರಾರಂಭ, ಘಟಸ್ಥಾಪನೆ,**
ಅ. 04 ಶುಕ್ರ-ಬಿದಿಗೆ-ಚಿತ್ತ
ಅ. 05 ಶನಿ-ಬಿದಿಗೆ-ಸ್ವಾತಿ
ಅ. 06 ಭಾನು-ತದಿಗೆ-ವಿಶಾಖ
ಅ. 07 ಸೋಮ-ಚತುರ್ಥಿ-ಅನುರಾಧ
ಅ. 08 ಮಂಗಳ-ಪಂಚಮಿ-ಜ್ಯೇಷ್ಠ
ಅ. **09 ಬುಧ-ಷಷ್ಠಿ-ಮೂಲ, ಸರಸ್ವತಿ ಪೂಜೆ**
ಅ. **10 ಗುರು-ಅಷ್ಟಮಿ-ಪೂ.ಷಾ. ಜೀವದಯಾಷ್ಟಮಿ**
ಅ. **11 ಶುಕ್ರ-ನವಮಿ-ಉ.ಷಾ. ಆಯುಧ ಪೂಜೆ**
ಅ. **12 ಶನಿ-ದಶಮಿ-ಶ್ರವಣ, ವಿಜಯದಶಮಿ ಪೂಜೆ, ಪೂಜ್ಯಶ್ರೀಗಳವರ ಸಿಂಹಾಸನಾರೋಹಣ, ಪಾದಪೂಜೆ**
ಅ. 13 ಭಾನು-ದಶಮಿ-ಧನಿಷ್ಠ
ಅ. 14 ಸೋಮ-ಏಕಾದಶಿ-ದ್ವಾದಶಿ-ಶತಬಿಷ
ಅ. 15 ಮಂಗಳ-ತ್ರಯೋದಶಿ-ಪೂ.ಭಾ.

## 75ನೇ ಅಮೃತ ಮಹೋತ್ಸವ ಆಚರಣೆ

**ಗೊಮ್ಮಟಗಿರಿ : ಇಲ್ಲಿಯ ಭಗವಾನ ಶ್ರೀ ಬಾಹುಬಲಿ ಸ್ವಾಮಿಯ 75ನೇ ಮಹಾಮಸ್ತಕಾಭಿಷೇಕದ ಅಮೃತ ಮಹೋತ್ಸವ ಕಾರ್ಯಕ್ರಮವನ್ನು ಡಿಸೆಂಬರ್ 13 ರಿಂದ 15ರವರೆಗೆ 3 ದಿನಗಳ ಕಾಲ ಆಯೋಜಿಸಲಾಗಿದೆ. ಸಮವಸರಣ ವೇದಿಕೆಯಲ್ಲಿ 10 ಆರಾಧನೆಗಳನ್ನು ಸಮೂಹವಾಗಿ ನಡೆಸಲು ಆಯೋಜಿಸಲಾಗಿದೆ. ಪ್ರತಿದಿನ ಮಸ್ತಕಾಭಿಷೇಕವನ್ನು ನಡೆಸಲಾಗುವುದು. ದಿನಾಂಕ 13-12-24ರಂದು ಕಲಿಕುಂಡ ಆರಾಧನೆ, ಜಿನಗುಣ ಸಂಪತ್ತಿ ಆರಾಧನೆ, ಭಕ್ತಾಮರ ಆರಾಧನೆ, ಶ್ರೀ ಶಾಂತಿಚಂದ್ರ ವಿಧಾನ, 14-12-24ರಂದು ಸರ್ವರಕ್ಷಾ ವಿಧಾನ, ಕಲ್ಯಾಣ ಮಂದಿರ, ಸಮೇದಗಿರಿ ಸಿದ್ಧಕ್ಷೇತ್ರ ಆರಾಧನೆ, ಬ್ರಹ್ಮದೇವರ ಆರಾಧನೆ, 15-12-24ರಂದು ಸರ್ವದೋಷ ಪ್ರಾಯಶ್ಚಿತ ಆರಾಧನೆಯನ್ನು ಹಮ್ಮಿಕೊಳ್ಳಲಾಗಿದೆ. ಆರಾಧನೆಗೆ ಕುಳಿತುಕೊಳ್ಳಬಯಸುವವರು ಸಮಿತಿಯವರಿಂದ ಕೂಪನ್ ಪಡೆದು ಆರಾಧನೆಗೆ ಕುಳಿತುಕೊಳ್ಳಬಹುದು. ಈ ಎಲ್ಲಾ ಕಾರ್ಯಕ್ರಮಗಳಿಗೆ ಶ್ರಾವಕ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿಬೇಕೆಂದು ಶ್ರೀ ಗೊಮ್ಮಟಗಿರಿ ಸೇವಾ ಸಮಿತಿಯವರು ವಿನಂತಿಸಿದ್ದಾರೆ. ಹೆಚ್ಚಿನ ಮಾಹಿತಿಗೆ ಸಂಪರ್ಕ: ಮೊ: 98807 25333, 98864 46310, 86604 70354, 77609 09999.**

## ಶರನ್ನವರಾತ್ರಿ-ವಿಜಯದಶಮಿ ಉತ್ಸವ

ಅತಿಶಯ ಶ್ರೀಕ್ಷೇತ್ರ ಹೊಂಬುಜದಲ್ಲಿ ಭಗವಾನ್ ಶ್ರೀ ಪಾರ್ಶ್ವನಾಥ ಸ್ವಾಮಿ ಹಾಗೂ ಜಗನ್ಮಾತೆ ಶ್ರೀ ಪದ್ಮಾವತಿ ದೇವಿ ಸನ್ನಿಧಿಯಲ್ಲಿ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಗಳವರ ನೇತೃತ್ವ, ಸಾನಿಧ್ಯ ಹಾಗೂ ಮಾರ್ಗದರ್ಶನದಲ್ಲಿ ಶರನ್ನವರಾತ್ರಿ ಹಾಗೂ ವಿಜಯದಶಮಿ ದಿನವನ್ನು ಪರಂಪರೆಯಂತೆ ಧಾರ್ಮಿಕ ವಿಧಿಪೂರ್ವಕವಾಗಿ ನೆರವೇರಿಸಲಾಗುವುದು.

ಅ. 03 ಗುರುವಾರದಂದು-ಶರನ್ನವರಾತ್ರಿ ಪ್ರಾರಂಭ (ಘಟಸ್ಥಾಪನೆ) ಅ. 09 ಬುಧವಾರ-ಸರಸ್ವತಿ ಪೂಜೆ, (ಮೂಲಾ ನಕ್ಷತ್ರ) ಅ. 10 ಗುರುವಾರ-ಜೀವದಯಾಷ್ಟಮಿ ಪೂಜೆ, ಅ. 11 ಶುಕ್ರವಾರ-ಮಹಾನವಮಿ (ಆಯುಧಪೂಜೆ) ಅ. 12 ಶನಿವಾರ-ವಿಜಯದಶಮಿ, ಬನ್ನಿಮಂಟಪಕ್ಕೆ ಶ್ರೀದೇವಿ ಪಲ್ಲಕ್ಕಿ ಉತ್ಸವ, ಸ್ವಸ್ತಿಶ್ರೀಗಳವರ ಸಿಂಹಾಸನಾರೋಹಣ ಹಾಗೂ ಶ್ರೀಗಳವರ ಪಾದಪೂಜೆ ನೆರವೇರಲಿದೆ.

ಹೊಂಬುಜ ಜೈನ ಮಠದ ಅಧೀನ ಕ್ಷೇತ್ರಗಳಾದ ಶ್ರೀಕ್ಷೇತ್ರ ಕುಂದಾದ್ರಿ, ವರಂಗ ಹಾಗೂ ಹಟ್ಟಿಯಂಗಡಿ ಜಿನಮಂದಿರಗಳಲ್ಲಿ ಶರನ್ನವರಾತ್ರಿ ಧಾರ್ಮಿಕ ಪೂಜಾ ವಿಧಿ-ವಿಧಾನಗಳು ನೆರವೇರಲಿವೆ. ಭಕ್ತವೃಂದದವರು ಶರನ್ನವರಾತ್ರಿ ಉತ್ಸವಗಳಲ್ಲಿ ಪಾಲ್ಗೊಂಡು ಪುಣ್ಯಭಾಗಿಗಳಾಗುವಂತೆ ಆಡಳಿತಾಧಿಕಾರಿಗಳು ವಿನಂತಿಸಿದ್ದಾರೆ.

**ಸಂಪರ್ಕ: ಪೂಜಾ ಸೇವೆ ಮೊ: 9481453653, ವಸತಿ ಮೊ: 9483801460.**

### ಶ್ರೀಕ್ಷೇತ್ರ ಹೊಂಬುಜದಲ್ಲಿ ಯಜ್ಞೋಪವೀತ ಧಾರಣೆ

## "ಸಮ್ಯಕ್ತ್ವ ಪಥವು ಸಾತ್ವಿಕವಾದುದು"

-ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ



**ಹೊಂಬುಜ : (ಆಗಸ್ಟ್ 19) ಜೈನ ಧರ್ಮದ ಸಿದ್ಧಾಂತಗಳನ್ನು ಜೀವನದಲ್ಲಿ ರೂಢಿಸಿಕೊಂಡು ಸಮ್ಯಕ್ ಜ್ಞಾನ, ದರ್ಶನ, ಚಾರಿತ್ರ್ಯದ ನೈಜ ಪಥವು ಸಾತ್ವಿಕವೂ, ಆಪ್ತವೂ ಆಗಿ ಉತ್ತಮ ಪರಿಣಾಮವುಂಟಾಗುವುದು** ಎಂದು ಹೊಂಬುಜ ಜೈನ ಮಠದ ಪೀಠಾಧೀಶರಾದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮಿಗಳವರು ಶ್ರಾವಣ ಮಾಸದ ಹುಣ್ಣಿಮೆಯಂದು ಆಚರಿಸುವ ಉಪಾಕರ್ಮದ ಕುರಿತು ತಿಳಿಸಿದರು.

ಪ್ರಾತಃ ಕಾಲದಲ್ಲಿ ಶ್ರೀ ಪಾರ್ಶ್ವನಾಥ ಸ್ವಾಮಿ, ಜಗನ್ಮಾತೆ ಶ್ರೀ ಪದ್ಮಾವತಿ ದೇವಿ ಸನ್ನಿಧಿಯಲ್ಲಿ ಪೂಜೆ ಸಲ್ಲಿಸಿ, ಶ್ರೀ ಜಿನೇಶ್ವರ ಬಿಂಬದ ಪೂಜೆ ನೆರವೇರಿಸಿ, ಶ್ರೀ ಮಠದ ಭಕ್ತರಿಗೆ, ಶ್ರೀ ಕುಂದಕುಂದ ವಿದ್ಯಾಪೀಠದ ವಿದ್ಯಾರ್ಥಿಗಳಿಗೆ ರತ್ನತ್ರಯಧಾರಣೆಯ ಪ್ರತೀಕವಾದ ಜನಿವಾರ ಹಾಕಿ ಆಶೀರ್ವಾದ ಮಾಡಿದರು.

**ಜೈನಾಗಮದ ಉಪದೇಶಗಳನ್ನು ನಿತ್ಯ ಪರಿಪಾಲಿಸಿ, ಆಹಾರ-ವಿಹಾರದಲ್ಲಿ ನಿಯಮಿತ ವ್ರತಧಾರಣೆ ಮಾಡುವುದರಿಂದ ಆರೋಗ್ಯವಂತರಾಗಿ, ಜ್ಞಾನವಂತರಾಗಿ ತಮ್ಮ ತಮ್ಮ ಕಾಯಕದಲ್ಲಿ ನಿಷ್ಠೆ ತೋರಿ ಯಶಸ್ವಿ ಜೀವನ ನಿರ್ವಹಿಸುವಂತರಾಗಿರಿ** ಎಂದು ಪ್ರವಚನದಲ್ಲಿ ಶ್ರೀಗಳವರು ತಿಳಿಹೇಳಿದರು.

### ಮಹಾಪರ್ವ ಉತ್ತಮ ಧರ್ಮಗಳ ಪರ್ಯೂಷಣ ಆರಂಭ

## "ಆತ್ಮನ ಗುಣ ಅರಿಯಲು ದಶಲಕ್ಷಣ ಮಹಾಪರ್ವ"

-ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ



**ಹೊಂಬುಜ :** ದಶಲಕ್ಷಣ ಪರ್ವ ಎನ್ನುವಂತಹದ್ದು ಆತ್ಮನ ಗುಣಗಳನ್ನು ತಿಳಿದುಕೊಳ್ಳಲು ಇರುವ ಪರ್ವ. ಇದರಲ್ಲಿ ಬರುವಂತಹ ಕ್ಷಮಾದಿ ದಶಲಕ್ಷಣ ಧರ್ಮಗಳು ಆತ್ಮನ ಲಕ್ಷಣಗಳಾಗಿದೆ. ಮೊದಲನೇಯದು ಉತ್ತಮ ಕ್ಷಮೆಯಾಗಿದ್ದು ಇದು ಕ್ರೋಧದ ಅಭಾವದಿಂದ ನಿಜವಾದಂತಹ ಸ್ವಾಭಾವವಾದಂತಹ ಕ್ಷಮಾಗುಣ ಪ್ರಕಟವಾಗುವಂತದಾಗಿದೆ. ಹಾಗೆಯೇ ಕ್ಷಮೆಯಿಂದ ನಾವು ಇನ್ನೊಬ್ಬರನ್ನು ಕ್ಷಮಿಸುವುದರೊಂದಿಗೆ ನಮಗೆ ಇನ್ನೊಬ್ಬರಿಂದ ಆದಂತಹ ಹಾನಿಯನ್ನು ಸಹ ಆ ಕ್ಷಣದಲ್ಲಿ ಮರೆತರೆ ನಮಗೆ ನಿಜವಾದಂತಹ ಕ್ಷಮಾಗುಣ ನಮ್ಮ ಧರ್ಮದಲ್ಲಿ ಇನ್ನಷ್ಟು ವೃದ್ಧಿಯಾಗುತ್ತದೆ.

ಅದಕ್ಕಾಗಿ ನಾವು ಯಾವಾಗಲೂ ಎಂತಹ ಕಠಿಣ ಪರಿಸ್ಥಿತಿಯಲ್ಲೂ ನಮಗೆ ನಿಂದೆ, ಅಪಮಾನ, ಅವಮಾನ ಮಾಡಲಿ ಯಾವ ಪರಿಸ್ಥಿತಿ ಯಾವುದೇ ಒಬ್ಬ ವ್ಯಕ್ತಿಗೆ ಆ ಸಂದರ್ಭದಲ್ಲಿ ಕ್ಷಮಿಸಿ ಅವನು ಪದೇ ಪದೇ ತಪ್ಪನ್ನು ಮಾಡಿದರೂ ಅವನನ್ನು ಕ್ಷಮಿಸಿ ಮುಂದೆ ನಮ್ಮ ಜೀವನವನ್ನು ನೋಡಿಕೊಳ್ಳಬೇಕು. ವಿಕೃತಿಯನ್ನು ಮಾಡುವವರ ಜೊತೆ ಯಾವುದೇ ರೀತಿಯ ಸಂಬಂಧವನ್ನು ಇಟ್ಟುಕೊಳ್ಳಬಾರದು ಎಂಬುದೇ ಕ್ಷಮಾ ಧರ್ಮವಾಗಿದೆ.

ನೂರಾರು ವರ್ಷ ತಪಸ್ಸು ಮಾಡಿದ ತಪಸ್ವಿಗಿಂತಲೂ ಕ್ಷಣ ಮಾತ್ರದಲ್ಲಿ ಯಾವುದೇ ಒಬ್ಬ ವ್ಯಕ್ತಿ ಮಾಡಿದ ತಪ್ಪನ್ನು ಕ್ಷಮಿಸುವವನೇ ನಿಜವಾದಂತಹ ಮಹಾನ್ ವ್ಯಕ್ತಿಯಾಗಿರುತ್ತಾನೆಂದು ಆಚಾರ್ಯರು ಹೇಳಿರುತ್ತಾರೆ.

ಶ್ರೀ ಪಾರ್ಶ್ವನಾಥ ಸ್ವಾಮಿ, ಶ್ರೀ ಜಗನ್ಮಾತೆ ಯಕ್ಷಿ ಶ್ರೀ ಪದ್ಮಾವತಿ ದೇವಿ ಸನ್ನಿಧಿಯಲ್ಲಿ ಪೂಜೆ ನೆರವೇರಿಸಿ, ಶ್ರೀ ಮಹಾವೀರ ತೀರ್ಥಂಕರರ ಸಾನಿಧ್ಯದಲ್ಲಿ ಆರ್ಯಿಕಾ ಶ್ರೀ 105 ಶಿವಮತಿ ಮಾತಾಜಿ ಉಪಸ್ಥಿತಿಯಲ್ಲಿ ಸ್ವಸ್ತಿಶ್ರೀಗಳವರು ಜೈನಾಗಮದಲ್ಲಿ ಮಹಾಪರ್ವ ಎಂದೇ ದಶಲಕ್ಷಣ ಅಥವಾ ಉತ್ತಮ ಹತ್ತು ಧರ್ಮಗಳು ಎಂಬ ಸಿದ್ಧಾಂತಗಳು ಲೋಕಶಾಂತಿಯತ್ತ ಸಾಗುವಂತೆ ಪ್ರೇರೇಪಿಸುತ್ತವೆ ಎಂದರು.

ಶ್ರೀ ನೇಮಿನಾಥ ಸ್ವಾಮಿ, ಶ್ರೀ ಸರಸ್ವತಿ ದೇವಿ, ಶ್ರೀ ಕೂಷ್ಮಾಂಡಿನಿ ದೇವಿ, ಶ್ರೀ ಆದಿನಾಥ ಸ್ವಾಮಿ ಸಾನಿಧ್ಯದಲ್ಲಿ ಧಾರ್ಮಿಕ ವಿಧಾನಗಳು ಜರುಗಿದವು. ಶ್ರೀ ಪದ್ಮಾವತಿ ಮಹಿಳಾ ಮಂಡಳ, ಹುಂಚ ಜೈನ ಶ್ರಾವಕರು, ಕುಂದಕುಂದ ವಿದ್ಯಾಪೀಠದ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಉತ್ತಮ ಕ್ಷಮಾ ಧರ್ಮದ ತತ್ವಗಳನ್ನು ಮನವರಿಕೆ ಮಾಡಿಕೊಂಡರು. ಮುಂದಿನ ಹತ್ತು ದಿನಗಳ ಪರ್ಯಂತ ನಿಯಮಾನುಸಾರ ಉಪವಾಸ, ಪೂಜೆ, ಸ್ವಾಧ್ಯಾಯ ಮಾಡುವ ಸಂಕಲ್ಪ ಮಾಡಿದರು. ಶ್ರೀಗಳವರ ಪ್ರವಚನ ನಿತ್ಯವೂ ಆಯೋಜಿಸಲ್ಪಟ್ಟಿತ್ತು.

## "ನೂತನ ಜಿನಾಲಯ, ವಿದ್ಯಾರ್ಥಿ ನಿಲಯ ನಿರ್ಮಾಣದ ಸಂಕಲ್ಪ"

-ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ



**ಹೊಂಬುಜ/ಶಿವಮೊಗ್ಗ:** ಅತಿಶಯ ಶ್ರೀಕ್ಷೇತ್ರ ಹೊಂಬುಜ ಜೈನ ಮಠದ ಪೂರ್ವ ಭಟ್ಟಾರಕರಾಗಿದ್ದ ಅರಹದ್ದಾಸ ಸ್ವಸ್ತಿಶ್ರೀ ದೇವೇಂದ್ರಕೀರ್ತಿ ಮಹಾಸ್ವಾಮೀಜಿಯವರ ಪರಿಕಲ್ಪನೆಯ ಜಿನಾಲಯದೊಂದಿಗೆ ಜೈನ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗಾಗಿ ನಿರ್ಮಿಸಿದ್ದ ಶ್ರೀ ವರ್ಧಮಾನ ವಿದ್ಯಾರ್ಥಿ ನಿಲಯವನ್ನು 1957ರಲ್ಲಿ ಸಮಾಜ ಬಾಂಧವರ ಸಹಕಾರದಿಂದ ನಿರ್ಮಿಸಿದ್ದರೆಂಬುದು ಶ್ಲಾಘನೀಯ ಸತ್ಕಾರ್ಯವಾಗಿದೆ ಎಂದು ಹೊಂಬುಜ ಪೀಠಾಧೀಶರಾಗಿರುವ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ ತಿಳಿಸಿದರು. 1962ರಲ್ಲಿ ವಿಸ್ತಾರಗೊಂಡ ವಿದ್ಯಾರ್ಥಿ ನಿಲಯ ನಿರ್ಮಾಣಗೊಂಡಿತು.

ಅವರು ಆ. 22ರಂದು ಶಿವಮೊಗ್ಗ ನಗರದ ಕೇಂದ್ರ ಪ್ರದೇಶದ ಶ್ರೀ ವರ್ಧಮಾನ ವಿದ್ಯಾರ್ಥಿ ಭವನವು ಶಿಥಿಲವಾಗುತ್ತಿದ್ದು, ನೂತನವಾಗಿ ಜಿನಾಲಯ ಮತ್ತು ವಿದ್ಯಾರ್ಥಿ ನಿಲಯವನ್ನು ಅದೇ ಸ್ಥಳದಲ್ಲಿ ಹೊಸ ವಿನ್ಯಾಸದಲ್ಲಿ, ಸಕಲ ಅನುಕೂಲತೆ, ವ್ಯವಸ್ಥೆಗಳಿರುವಂತೆ ನಿರ್ಮಿಸಲು ಸಂಕಲ್ಪ ಮಾಡುವ ಆಗಮೋಕ್ತವಿಧಿಯ ಜಿನಪೂಜೆಯನ್ನು ನೆರವೇರಿಸಿ ಹೇಳಿದರು.

ಅರಹದ್ದಾಸರು ನಾಡಿನ ಎಲ್ಲೆಡೆ ವಿಹಾರ ಮಾಡಿ ದೂರಗಾಮಿ, ವಿಶಾಲ ದೃಷ್ಟಿಕೋನದ ವಿದ್ಯಾರ್ಥಿ ನಿಲಯ ಮತ್ತು ಮುದ್ರಣ ಘಟಕ ಜಿನಧರ್ಮದ ವಿದ್ಯಾದಾನ, ಶಾಸ್ತ್ರದಾನದ ಔಚಿತ್ಯವನ್ನು ಪಸರಿಸಿದುದು ದಾಖಲಾರ್ಹವಾದುದೆಂದು ಶ್ರೀಗಳು ಹಳೆಯ ವಿಚಾರಗಳು ಇಂದಿನ ಯುವ ವಿದ್ಯಾರ್ಥಿಗಳು ಅರಿತು ಶೈಕ್ಷಣಿಕವಾಗಿ ಅಗ್ರಮಾನ್ಯ ಸ್ಥಾನಗಳಿಸುವಂತಾಗಬೇಕು ಎನ್ನುತ್ತಾ ಪೂರ್ವ ಪೀಠಾಧೀಶರಾಗಿದ್ದ ಸ್ವಸ್ತಿಶ್ರೀ ಹೇಮರತ್ನ ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರೂ ಇಲ್ಲಿಯೇ ವಿದ್ಯಾಭ್ಯಾಸ, ಧರ್ಮ ಪ್ರಭಾವನೆ ಪಡೆದಿರುವುದನ್ನು ಮರೆಯಲಾಗದು ಎಂದು ನೆನಪಿಸಿಕೊಂಡರು.


ಎಲ್ಲಿ ಕ್ಷೇತ್ರಗಳಲ್ಲಿ ವಿದ್ಯಾರ್ಥಿ ನಿಲಯದಲ್ಲಿ ತಂಗಿ, ವಿದ್ಯಾರ್ಜನೆ ಮಾಡಿದವರು ಸಮಾಜದಲ್ಲಿ ಗುರುತಿಸಿಕೊಂಡಿರುವರೆಂದು ಸ್ವಸ್ತಿಶ್ರೀ ಸ್ವಾಮೀಜಿಯವರು ಧರ್ಮ ಮತ್ತು ಶಿಕ್ಷಣ ಉತ್ತಮ ರೀತಿಯಲ್ಲಿ ಸಂಸ್ಕಾರ ನೀಡಿದೆ ಎಂಬ ವಿಚಾರವನ್ನು ಸ್ಮರಿಸಿದರು.

WWW.HOMBUJAPADMAVATI.ORG

**ಉತ್ತಮ ಸೇವೆ:** ಶಿವಮೊಗ್ಗ ನಗರದಲ್ಲಿ ಮಂಗಳೂರು, ಉಡುಪಿ, ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಯ ಗ್ರಾಮೀಣ ಪ್ರದೇಶದ ನೂರಾರು ವಿದ್ಯಾರ್ಥಿಗಳು ಇದೇ ವಿದ್ಯಾರ್ಥಿ ನಿಲಯದಲ್ಲಿ ಆಶ್ರಯ ಪಡೆದು ಸಮಾಜದಲ್ಲಿ ಉನ್ನತ ಸ್ಥಾನವನ್ನು ಪಡೆದಿರುವರು. ಇಲ್ಲಿಯ ಜಿನಾಲಯದಲ್ಲಿ ಪಂಚಪರ್ವಗಳಲ್ಲದೇ ನೋಂಪಿ, ಆರಾಧನೆ ಮುಂತಾದ ಧಾರ್ಮಿಕ ವಿಧಿ-ವಿಧಾನಗಳು ನೆರವೇರಿದ್ದು ಧರ್ಮ ಪ್ರಭಾವನೆಯು ಸಾಂಗವಾಗಿ ನೆರವೇರಿದೆ. ಮಹಾವೀರ ಮುದ್ರಣಾಲಯವನ್ನು ಪ್ರಾರಂಭಿಸಿ ಈ ಮೂಲಕ 'ಗುರುದೇವ' ಮಾಸ ಪತ್ರಿಕೆಯ ಮುದ್ರಣವನ್ನು ಇದೇ ಕಟ್ಟಡದಲ್ಲಿ ಆರಂಭಿಸಿ, ಶಾಸ್ತ್ರದಾನ ಕೆಲವು ಕೃತಿಗಳೂ ಪ್ರಕಟಗೊಂಡಿವೆ.

ಅತ್ಯಾಧುನಿಕ ವಿನ್ಯಾಸದಲ್ಲಿ, ವಾಸ್ತುಶಾಸ್ತ್ರದ ತಳಹದಿಯಲ್ಲಿ ಜಿನಾಲಯ, ವಿದ್ಯಾರ್ಥಿ ನಿಲಯವು ನಿರ್ಮಾಣವಾಗುವ ಶುಭ ಸಂಕಲ್ಪಕ್ಕೆ ಜೈನ ಸಮಾಜದ ಬಂಧುಗಳು ಸಹಾಯ ನೀಡುವರೆಂಬ ನಿರೀಕ್ಷೆಯಿದೆಯೆಂದು ಶ್ರೀಮಠದ ಪ್ರಕಟನೆ ತಿಳಿಸಿದೆ.

## ಹರಸೂರ ಪಂಚಕಲ್ಯಾಣ ಪೂರ್ವಭಾವಿ ಸಭೆ



**ಹರಸೂರ (ಕಲಬುರಗಿ ಜಿಲ್ಲೆ)** ಇಲ್ಲಿಯ ಶ್ರೀ ಮದ್ದೇವಾದಿದೇವ 1008 ಭಗವಾನ ವಿಘ್ನಹಾರ ಪಾರ್ಶ್ವನಾಥ ತೀರ್ಥಂಕರ ಪಂಚಕೂಟ ಬಸದಿಯಲ್ಲಿ 2024ರ ಡಿಸೆಂಬರ್ 6, 7, 8 ರಂದು ನೂತನ ಮಾನಸ್ತಂಭ ಹಾಗೂ ಚತುರ್ಮುಖ ಜಿನಬಿಂಬ ಮತ್ತು ಧಾಮಸಂಪ್ರೋಕ್ಷಣ ಹಾಗೂ ಪಂಚಕಲ್ಯಾಣ ಪ್ರತಿಷ್ಠಾ ಮಹಾಮಹೋತ್ಸವವು ನೆರವೇರಲಿದ್ದು ಇದರ ಅಂಗವಾಗಿ ಹೊಂಬುಜ ಜೈನ ಮಠದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರ ಸಾನಿಧ್ಯದಲ್ಲಿ ಸೆ. 01ರ ಭಾನುವಾರದಂದು ಸವಾಲು ಕಾರ್ಯಕ್ರಮವು ಗಾಜಿಪುರ-ಕಲಬುರಗಿಯ ಶ್ರೀ 1008 ಆದಿನಾಥ ದಿಗಂಬರ ಜೈನ ಮಂದಿರದಲ್ಲಿ ನೆರವೇರಿತು.

ಅಂದು ಬೆಳಿಗ್ಗೆ 8.00ಕ್ಕೆ ಅಭಿಷೇಕ, 9.00ಕ್ಕೆ ಭಗವಾನ ಶ್ರೀ ಪಾರ್ಶ್ವನಾಥ ವಿಧಾನ ಕಾರ್ಯಕ್ರಮಗಳು ಜರುಗಿದವು. 11.30ಕ್ಕೆ ಸವಾಲು ಕಾರ್ಯಕ್ರಮ, ಪೂಜ್ಯ ಸ್ವಾಮೀಜಿಯವರ ಪಾದಪೂಜೆ, ಧರ್ಮ ಉಪದೇಶ ನೆರವೇರಿತು. ನಂತರ ಆರತಿ ಕಾರ್ಯಕ್ರಮ ವಿಧಾನ ವಿಸರ್ಜನೆ ನೆರವೇರಿತು. ಹರಸೂರಿನ ಶ್ರೀ ದಿಗಂಬರ ಜೈನ ಕಲ್ಯಾಣ ಟ್ರಸ್ಟ್ (ರಿ.) ವತಿಯಿಂದ ಕಾರ್ಯಕ್ರಮವನ್ನು ಯಶಸ್ವಿಯಾಗಿ ನೆರವೇರಿಸಿಕೊಡಲಾಯಿತು.

## ಶ್ರೀಕ್ಷೇತ್ರ ಹೊಂಬುಜದಲ್ಲಿ ಶ್ರಾವಣ ಮಾಸದ ಶುಕ್ರವಾರದ ಪೂಜೆ ಸಂಪನ್ನ

# "ಆಧ್ಯಾತ್ಮಿಕ ಸಿರಿ ಸಮೃದ್ಧವಾದಾಗ ಜೀವನ ಸಂತೃಪ್ತಿ"

–ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ



**ಹೊಂಬುಜ :** ಧಾರ್ಮಿಕ ಪರ್ವದಿನಗಳು ನಿತ್ಯ ಆಚರಿಸಲ್ಪಡುತ್ತವೆ. ಶ್ರಾವಣ ಮಾಸದ ಶುಕ್ರವಾರಗಳಂದು ಅಭೀಷ್ಟವರ ಪ್ರದಾಯಿನಿ ಯಕ್ಷಿ ಶ್ರೀ ಪದ್ಮಾವತಿ ದೇವಿ ಸನ್ನಿಧಿಯಲ್ಲಿ ಭಕ್ತ ಸಮುದಾಯದವರು ಶ್ರದ್ಧಾ ಭಕ್ತಿಯಿಂದ ಸಂಕಷ್ಟಗಳಿಂದ ಮುಕ್ತರಾಗಿ ಉತ್ತಮ ಸಂಸ್ಕಾರ ಬೆಳೆಸುವಂತೆ ಪ್ರಾರ್ಥನೆ ಸಲ್ಲಿಸುತ್ತಾರೆ ಎಂದು ಹೊಂಬುಜ ಪೀಠಾಧೀಶರಾದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮಿಗಳವರು ಶ್ರಾವಣ ಮಾಸದ ಶುಕ್ರವಾರದಂದು ಆಶೀರ್ವಚನದಲ್ಲಿ ತಿಳಿಸಿದರು.

ಶ್ರೀ ವರಮಹಾಲಕ್ಷ್ಮೀ ದೇವಿ ಆರಾಧನೆಯನ್ನು ಆಧ್ಯಾತ್ಮಿಕ ಸಿರಿ ಸಮೃದ್ಧವಾಗಲು ಮತ್ತು ಧನಕನಕಾದಿ ಸಮೃದ್ಧವಾಗಿ ಸಂಕಷ್ಟ ಪರಿಹರಿಸಲು ವಿಶೇಷ ವ್ರತವನ್ನು ಕೈಗೊಳ್ಳುವರು. ಧನಕನಕಾದಿ ಸಂಪತ್ತಿಕ್ಕಿಂತಲೂ ಆಧ್ಯಾತ್ಮಿಕ ಸಂಪತ್ತು ವರ್ಧಿಯಾದಾಗ ಜೀವನ ಸಂತೃಪ್ತಿ ಪ್ರಾಪ್ತಿ ಆಗುತ್ತದೆ ಎಂದು ಪೂಜೆಯಲ್ಲಿ ಪಾಲ್ಗೊಂಡ ಭಕ್ತರನ್ನು ಹರಸಿ, ಆಶೀರ್ವದಿಸಿದರು.

ಶ್ರೀ ಪಾರ್ಶ್ವನಾಥ ಸ್ವಾಮಿ, ಯಕ್ಷಿ ಶ್ರೀ ಪದ್ಮಾವತಿ ದೇವಿ ಸನ್ನಿಧಿಯಲ್ಲಿ ಸಮರ್ಪಿಸುವ ತ್ರಿಕರಣಪೂರ್ವಕ ಇಷ್ಟಾರ್ಥ ಪೂಜೆ ಸಮರ್ಪಣೆಯಿಂದ ಭಾವಶುದ್ಧಿ, ಅಂತರಂಗ ಶುದ್ಧಿ ಮತ್ತು ಜೀವನ ಚೈತನ್ಯ ಪ್ರಾಪ್ತಿ ಆಗುತ್ತದೆ. ಭಕ್ತವೃಂದದವರು ತಮ್ಮ ಭಕ್ತಿ ಸಮರ್ಪಣೆಯಿಂದ ಜಗನ್ಮಾತೆ ಸಂತುಷ್ಟಿ ಹೊಂದಿ ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ಸ್ವ–ಇಚ್ಛೆಯ ಸೇವೆಯು ಫಲಿಸಲಿ ಎಂದರು.

ಮೂರನೇ ಶುಕ್ರವಾರದಂದು ವರೂರು ಜೈನ ಮಠದ ಪರಮಪೂಜ್ಯ ಸ್ವಸ್ತಿಶ್ರೀ ಧರ್ಮಸೇನ ಭಟ್ಟಾರಕ ಮಹಾಸ್ವಾಮಿಗಳವರು ಹಾಗೂ ನಾಲ್ಕನೇ ಶುಕ್ರವಾರದಂದು ಸೋಂದಾ ಜೈನ ಮಠದ ಪರಮಪೂಜ್ಯ ಸ್ವಸ್ತಿಶ್ರೀ ಅಕಲಂಕಕೇಸರಿ ಭಟ್ಟಾಕಲಂಕ ಭಟ್ಟಾರಕ ಮಹಾಸ್ವಾಮೀಜಿಯವರು ದರ್ಶನಾರ್ಥವಾಗಿ ಆಗಮಿಸಿದ್ದರು.

ಷೋಡೋಪಚಾರ ಪೂಜೆ, ಹೂವು–ಫಲಗಳಿಂದ ಶೃಂಗರಿಸಿದ ಜಿನಮಂದಿರಗಳಲ್ಲಿ ಆಗಮೋಕ್ತ ಧಾರ್ಮಿಕ ವಿಧಿ–ವಿಧಾನಗಳು ಸಾಂಗವಾಗಿ ನೆರವೇರಿದವು. 108 ವಿವಿಧ ಧಾನ್ಯ, ಫಲ, ಹೂವು, ಕಜ್ಜಾಯ ನೈವೇದ್ಯ ಶ್ರೀ ಪದ್ಮಾವತಿ ದೇವಿ ಸನ್ನಿಧಿಯಲ್ಲಿ ಪೂಜ್ಯ ಶ್ರೀಗಳವರಿಂದ ಭಕ್ತರ ಉಡಿ–ಕಾಣಿಕೆ–ಹರಕೆ ದ್ರವ್ಯಗಳನ್ನು ಸಮರ್ಪಿಸುವ ದೃಶ್ಯ ಕಂಡು ಧನ್ಯತಾಭಾವದಿಂದ ಭಕ್ತರು ಪದ್ಮಾವತಿ ದೇವಿಯೇ ನಮಃ, ಅಹಿಂಸಾ ಪರಮೋ ಧರ್ಮಕೀ ಜೈ ಎಂದು ಜಯಕಾರ ಹಾಕಿದರು.

ಶ್ರೀ ನೇಮಿನಾಥ ಸ್ವಾಮಿ, ಶ್ರೀ ಕೂಷ್ಮಾಂಡಿನಿ ದೇವಿ, ಶ್ರೀ ಸರಸ್ವತಿ ದೇವಿ, ಶ್ರೀ 1008 ಪಾರ್ಶ್ವನಾಥ ಸ್ವಾಮಿ ಹಾಗೂ ಜಗನ್ಮಾತೆ ಶ್ರೀ ಪದ್ಮಾವತಿ ದೇವಿ ಸನ್ನಿಧಿಯಲ್ಲಿ ಪರಂಪರಾನುಗತ ಆಗಮೋಕ್ತ ಶಾಸ್ತ್ರದನ್ವಯ ಪೂಜೆಗಳು ಸಾಂಗವಾಗಿ ನೆರವೇರಿದುವು. ನವಧಾನ್ಯಗಳು, ಹಣ್ಣುಹಂಪಲುಗಳು, ಸಿಹಿ ಖಾದ್ಯಗಳು, 108 ಉಡಿ ದೇವರಿಗೆ ಸಮರ್ಪಿಸಲಾಯಿತು. ಪುಷ್ಪಾಲಂಕಾರದಿಂದ ಜಿನಮಂದಿರ, ಜಿನಬಿಂಬಗಳು ಶೋಭಾಯಮಾನವಾಗಿ ಕಂಡುಕೊಂಡು ಭಕ್ತವೃಂದದವರು ಧನ್ಯರಾದರು. ಯಥೋಚಿತ ಉಪಹಾರ, ಅನ್ನಪ್ರಸಾದದ ವ್ಯವಸ್ಥೆಯನ್ನು ಮಾಡಲಾಗಿತ್ತು. ಪರವೂರ ಭಕ್ತಾದಿಗಳಿಗೆ ವಸತಿ ಸೌಕರ್ಯ ಕಲ್ಪಿಸಲಾಗಿತ್ತು.



WWW.HOMBUJAPADMAVATI.ORG


|| ಭಗವಾನ್ ಶ್ರೀ ಪಾರ್ಶ್ವನಾಥಾಯ ನಮಃ ||



|| ಜಗನ್ಮಾತೆ ಶ್ರೀ ಪದ್ಮಾವತಿ ದೇವಿ ನಮಃ ||



ಶ್ರೀ ಹೊಂಬುಜ
ಅತಿಶಯ ಮಹಾಕ್ಷೇತ್ರದಲ್ಲಿ

ಶ್ರೀ ಶರನ್ನವರಾತ್ರಿ ಮತ್ತು ವಿಜಯದಶಮಿ
ಪೂಜಾ ಮಹೋತ್ಸವಗಳು

03-10-2024 ನೇ ಗುರುವಾರದಿಂದ 12-10-2024 ನೇ ಶನಿವಾರದವರೆಗೆ

ಭಗವಾನ್ ಶ್ರೀ ಪಾರ್ಶ್ವನಾಥಸ್ವಾಮಿ ಮತ್ತು ಜಗನ್ಮಾತೆ ಶ್ರೀಪದ್ಮಾವತಿ ಅಮ್ಮನವರ ಮಹಾಸನ್ನಿಧಿಯಲ್ಲಿ



ಪರಮಪೂಜ್ಯ ಜಗದ್ಗುರು
ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಗಳವರ
ದಿವ್ಯಸಾನಿಧ್ಯ, ನೇತೃತ್ವ ಹಾಗೂ ಮಾರ್ಗದರ್ಶನದಲ್ಲಿ
ಪರಂಪರೆಯಂತೆ ವೈಭವದಿಂದ ನೆರವೇರಲಿದೆ.

ಕಾರ್ಯಕ್ರಮಗಳು

| | |
|---|---|
| 03–10–2024, ಗುರುವಾರ | ಶರನ್ನವರಾತ್ರಿ ಉತ್ಸವ ಪ್ರಾರಂಭ, ಘಟಸ್ಥಾಪನೆ, ಮಹಾನ್ನೈವೇದ್ಯ ಪೂಜೆ. |
| 09–10–2024, ಬುಧವಾರ | ಸರಸ್ವತಿ ಪೂಜೆ. |
| 10–10–2024, ಗುರುವಾರ | ಜೀವದಯಾಷ್ಟಮಿ. |
| 11–10–2024, ಶುಕ್ರವಾರ | ಆಯುಧ ಪೂಜೆ ಮತ್ತು ಮಹಾನವಮಿ. |
| 12–10–2024, ಶನಿವಾರ | ವಿಜಯದಶಮಿ ಉತ್ಸವ, ಶ್ರೀ ಮಹಾದೇವಿ ಪಲ್ಲಕ್ಕಿ ಉತ್ಸವ, ಹೊಂಬುಜದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಗಳವರ ಪರಂಪರಾಗತ ಸಿಂಹಾಸನಾರೋಹಣ, ಶ್ರೀಗಳವರ ಪಾದಪೂಜೆ. |

ಅತಿಶಯ ಶ್ರೀಕ್ಷೇತ್ರ ವರಂಗ ಮತ್ತು ಶ್ರೀಕ್ಷೇತ್ರ ಹಟ್ಟಿಯಂಗಡಿ ಜಿನಮಂದಿರಗಳಲ್ಲಿ ಶರನ್ನವರಾತ್ರಿ ಧಾರ್ಮಿಕ ಉತ್ಸವಾದಿ ಪೂಜಾ ವಿಧಿಗಳು ನೆರವೇರುವವು. ಸರ್ವ ಭಕ್ತವೃಂದದವರು ಶರನ್ನವರಾತ್ರಿ ಪೂಜಾ ವಿಧಿಗಳಲ್ಲಿ ಪಾಲ್ಗೊಂಡು ಪುಣ್ಯಭಾಗಿಗಲಾಗುವಂತೆ ಅಪೇಕ್ಷಿಸಲಾಗಿದೆ.

ಸರ್ವರಿಗೂ ಆದರದ ಸ್ವಾಗತ

ಸಂಪರ್ಕ :
ಸೇವೆ : 9481453653
ವಸತಿ : 9483801460

ಆಡಳಿತಾಧಿಕಾರಿ
ಶ್ರೀಹೊಂಬುಜ ಜೈನ ಮಠ.
ಅಂಚೆ: ಹುಂಚ–577436, ಶಿವಮೊಗ್ಗ ಜಿಲ್ಲೆ

KARNATAKA BANK
sri hombuja jain math
VPA: hombujajainmath@kbl
SCAN QR CODE TO PAY
BHIM UPI
G Pay paytm amazon pay

ವಿ.ಸೂ. : ಭಕ್ತಾದಿಗಳು ತಮ್ಮ ಕಾಣಿಕೆಯನ್ನು
ಎಂ.ಓ/ಬ್ಯಾಂಕ್ ಡ್ರಾಫ್ಟ್/ಚೆಕ್ ಮೂಲಕ ಕಳುಹಿಸಿಕೊಡಬಹುದು

NEFT/RTGS ಮೂಲಕ ಕಾಣಿಕೆ ಸಂದಾಯಕ್ಕಾಗಿ :
Sri Hombuja Jain Math
S.B. A/c No : 31825001010250001
with Karnataka Bank, Humcha Br.
IFSC Code : KARB0000318

Face book page
www.facebook.com/hombujapadmavathi
E-mail: shrihombuja@gmail.com
website : www.hombujapadmavathi.org



ಗುರುದೇವ

GURUDEVA MONTHLY
RNI No. 13248/57-POSTEL REGD No. KA/SK/SMG 198/2024-26
Date of Posting 17th of every month. Sub Post office, Humcha - 577436

ವಾರ್ಷಿಕ ಚಂದಾ : ರೂಪಾಯಿ 150–00 ಮತ್ತು ಆಜೀವ ಸದಸ್ಯತ್ವಕ್ಕೆ : ರೂಪಾಯಿ 1000–00 ಮಾತ್ರ

ವ್ಯವಸ್ಥಾಪಕರು, "ಗುರುದೇವ" ಕಾರ್ಯಾಲಯ, ಅಂಚೆ : ಹೊಂಬುಜ, ಶಿವಮೊಗ್ಗ–ಜಿಲ್ಲೆ, ಕರ್ನಾಟಕ–೫೭೭೪೩೬



Edited, Published & Printed by Sri C.D. Ashok Kumar, on behalf of Swasthishree Devendrakeerthi Bhattaraka Pattacharyavarya Swamiji, Sri Hombuja Jain Math
Printed at Sri Mahaveer Printing Press, J.P.N. Road, Durgigudi, Shimoga (Ph: 08182- 222044) and Published at Gurudeva Karyalaya Sri Hombuja Jain Math
Post: Humcha, Tq. Hosanagar., Dist. Shimoga-577436 Ph : 08185-262722